**ದಿನಾಂಕಃ 02-11-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ವಾದಿ ಪರವಾಗಿ ಶ್ರೀ ಯು.ಎಂ., ವಕೀಲರಿಂದಃ**

ನಾನು ನನ್ನ ಮುಖ್ಯವಿಚಾರಣೆಯ ಬಾಬ್ತು ಪ್ರಮಾಣ ಪತ್ರಿಕೆಯನ್ನು ಸಲ್ಲಿಸಿದ್ದು, ಅದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತವೆ. ಅವುಗಳನೆಲ್ಲಾ ಓದಿಸಿ, ಕೇಳಿಸಿಕೊಂಡು ಸಹಿ ಮಾಡಿರುತ್ತೇನೆ.

ನಿಪಿ. 2 ಅನ್ನು ನಾನೇ ಬರೆದಿರುತ್ತೇನೆ. ಸಾಕ್ಷಿ ನಿಪಿ. 2 ರಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ. 2(ಹೆಚ್) ಎಂದು ಗುರುತಿಸಲಾಗಿರುತ್ತದೆ. ನಿಪಿ. 2 ಕ್ಕೆ ಕೃಷ್ಣಪ್ಪ, ದೊಡ್ಡಣ್ಣ ಹಾಗೂ ಮತ್ತೊಬ್ಬರು ಸಹಿ ಮಾಡಿರುತ್ತಾರೆ. ಸಾಕ್ಷಿ ಕೃಷ್ಣಪ್ಪ ಮತ್ತು ದೊಡ್ಡಣ್ಣ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ನಿಪಿ. 2(ಎಫ್) ಮತ್ತು 2(ಡಿ) ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿ ನಿಪಿ. 2 ರಲ್ಲಿ ಇರುವ ರಾಮಾಂಜಿನಪ್ಪ, ಲಕ್ಷ್ಮಿದೇವಮ್ಮ, ವಿಷ್ಣುವರ್ಧನ ಮತ್ತು ದಿವ್ಯಶ್ರಿ ರವರ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ ಅವುಗಳನ್ನು ಈಗಾಗಲೇ ನಿಪಿ. 2(ಎ) ಯಿಂದ 2(ಡಿ) ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಹಾಜರಿದ್ದು ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಿ ಮುಂದೂಡಲಾಯಿತು)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ**

**ಪಿ ಸಿ ಜೆ ಮತ್ತು ಜೆ ಎಂ ಎಫ್ ಸಿ**
ಪಾವಗಡ